ದಿನಾಂಕಃ **04-02-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 2 ರವರಿಂದ,**

1) ನಿಪಿ 3 ಪಂಚಾಯ್ತಿ ಪಾಲುಪಟ್ಟಿ ಪ್ರಕಾರ ನನ್ನ ಭಾಗಕ್ಕೆ ಬಂದ ಆಸ್ತಿಗಳು ಮಾತ್ರ ನನ್ನ ಸ್ವಾಧೀನದಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ನಿಪಿ 3 ದಾಖಲೆಯಲ್ಲಿ ಬಿ ಅನುಸೂಚಿ ಸ್ವತ್ತಿನ ವಿವರವನ್ನು ನನ್ನ ವಾದಪತ್ರದಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಿಃ 14-06-2001 ರಲ್ಲಿ ನನ್ನ ತಾಯಿ ಬಿ ಅನುಸೂಚಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಕ್ಕೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಪ್ರತಿವಾದಿ 7 ರವರಿಗೆ ದಿಃ 03-07-1994 ರಂದು ಮದುವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 6 ರವರಿಗೆ ದಿಃ 04-05-1997 ರಂದು ಮದುವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ನಮ್ಮ ಮನೆಯಲ್ಲಿ ಇತರೆ ಮದುವೆ ಕಾರ್ಯ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮಾರಾಟ ಮಾಡಿರುವ ಕ್ರಯ ಪತ್ರದಲ್ಲಿ ಮದುವೆಗಳ ಖರ್ಚಿಗಾಗಿ ಮಾರಾಟ ಮಾಡಿರುತ್ತೇನೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ.

2) ನನ್ನ ತಾಯಿ ಮಾರಾಟ ಮಾಡಿರುವ ಆಸ್ತಿಯನ್ನು ನನ್ನ ತಂದೆ 1968 ರಲ್ಲಿ ಪಂಚಾಯ್ತಿಯಿಂದ ಮಂಜೂರು ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದಲ್ಲಿ 2 ನೇ ಪ್ರತಿವಾದಿಯ ಹೆಸರನ್ನು ನಮೂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದಲ್ಲಿ 2 ನೇ ಪ್ರತಿವಾದಿಯ ಹೊರತುಪಡಿಸಿ ಇತರೆ ಐದು ಜನ ಗಂಡು ಮಕ್ಕಳ ಹೆಸರು ನಮೂದಾಗಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು 37 ಸಾವಿರ ಹಣಕ್ಕೆ ಕ್ರಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯದ ಪ್ರತಿಫಲವನ್ನು 2 ನೇ ಪ್ರತಿವಾದಿಯ ಭಾಗಕ್ಕೆ ಬರಬೇಕಾದ ಹಣವನ್ನು ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ಭಾಗಕ್ಕೆ ಬಂದ ಆಸ್ತಿಗಳಲ್ಲಿ ನಾನು ವ್ಯವಸಾಯ

ಮಾಡುತ್ತಿದ್ದೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳಲ್ಲಿ ಭಾಗ ಬೇಕು ಎಂದು ಪ್ರತಿವಾದಿಗಳು ಕೇಳಿರುವುದಿಲ್ಲ.

3) ನನ್ನ ವಾದ ಪತ್ರದಲ್ಲಿ ಭಾಗಂಶ ವಿಷಯವಾಗಿ ಅನೇಕ ಬಾರಿ ಪಂಚಾಯ್ತಿ ಮಾಡಿರುತ್ತೇವೆ ಎಂದು ಹೇಳಿರುವುದಿಲ್ಲ. ನನ್ನ ವಾದ ಪತ್ರದಲ್ಲಿ ಪ್ರತಿವಾದಿಗಳು ನನ್ನ ಹಕ್ಕನ್ನು ಮೊಟಕು ಗೊಳಿಸುವ ಉದ್ದೇಶದಿಂದ ನಿರಾಕರಿಸಿರುವುದಾಗಿ ಹೇಳಿರುವುದಿಲ್ಲ. ಪಂಚಾಯ್ತಿಯಲ್ಲಿ ವಿಫಲವಾದ ಕಾರಣ ನಾನು ಪ್ರತಿವಾದಿಗಳಿಗೆ ನೋಟೀಸು ನೀಡಿರುವುದಿಲ್ಲ. ನಾನು ನೀಡಿರುವ ತಿಳುವಳಿಕೆ ಪತ್ರದಲ್ಲಿ ಎಲ್ಲಾ ಪ್ರತಿವಾದಿಗಳ ಹೆಸರುಗಳು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ನಾನು ನೀಡಿರುವ ತಿಳುವಳಿಕೆ ಪತ್ರವೇ ವ್ಯಾಜ್ಯ ಕಾರಣವಾಗಿರುತ್ತದೆ.

4) ನನ್ನ ದೊಡ್ಡಪ್ಪನ ಸಮಾಧಿ ಸರ್ವೆ ನಂ. 2 ಎ ನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಬಗ್ಗೆ ದಿಃ 31-12-2017 ರಂದು ನನ್ನ ಮತ್ತು ಪ್ರತಿವಾದಿಗಳ ನಡುವೆ ಒಪ್ಪಂದ ಆಗಿತ್ತು ಎಂದರೆ ಸರಿಯಲ್ಲ. ಸದರಿ ಒಪ್ಪಂದ ಪ್ರಕಾರ ಹೆಣ್ಣು ಮಕ್ಕಳಿಗೂ ಭಾಗ ಕೊಡಬೇಕು ಎಂದು ಕರಾರು ಆಗಿತ್ತು ಎಂದರೆ ಸರಿಯಲ್ಲ. ದಿಃ 31-12-2017 ರಂದು ಆಗಿರುವ ಒಪ್ಪಂದವನ್ನು ನಾನು ಒಪ್ಪಿಕೊಳ್ಳುವುದಿಲ್ಲ, ಕಾರಣ ಎಲ್ಲಾ ಹೆಣ್ಣು ಮಕ್ಕಳಿಗೂ ಭಾಗಾಂಶ ಕೊಟ್ಟರೆ ಒಪ್ಪಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದ ವಿವರಗಳನ್ನು ಸುಳ್ಳಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ